ಹೋದಾಗ ನಾನು ಪ್ರತ್ಯಕ್ಷ ಹೋಗಿದ್ದೇನೆ. ಔಷಧಿಗಳು ಕೊರತೆ ಇದ್ದರೆ ಅವನ್ನು ಖರೀದಿಸುವ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿದ್ದೇನೆ. ಅಮೌಂಟನ್ನೂ ನಿಗಧಿಮಾಡಿದ್ದೇವೆ. ಈಗಾಗಲೇ ಅವರು ಖರೀದಿ ಮಾಡುತ್ತಿದ್ದಾರೆ, ಇವತ್ತಿನ ಪರಿಸ್ಥಿತಿಯಲ್ಲಿ ಸಮಸ್ಯೆಯಾಗುವುದಿಲ್ಲವೆಂದು ನಾನು ಭಾವಿಸುತ್ತೇನೆ. ಅಲ್ಲಿರುವ ಸೆಕ್ಯುರಿಟಿ ಅಥವಾ "ಡಿ" ಗ್ರೂಪ್ ನೇಮಕಾತಿ ಬಗ್ಗೆ ಆಗಲಿ ಸರ್ಕಾರದಿಂದ ಮಾಡಬೇಕೋ ಅಥವಾ ಕಾಂಟ್ರಾಕ್ಟ್ ಮೂಲಕ ಮಾಡಿಸಬೇಕೋ ಎಂದು ವಿಚಾರ ಮಾಡುತ್ತಿದ್ದೇವೆ. ಸ್ವಚ್ಛತೆ ಕಾಪಾಡುವ ಸಲುವಾಗಿ ಇವತ್ತು ನಿಮಾನ್ಸ್‌ನಲ್ಲಾಗಲೀ ಕಿಡ್ವಾಯಿಯಲ್ಲಾಗಲೀ ಯಾವರೀತಿ ಆಸ್ಪತ್ರೆಗಳನ್ನು ಸ್ವಚ್ಛ ಮಾಡುತ್ತಿದ್ದಾರೆ ಸೆಕ್ಯುರಿಟಿಯನ್ನು ಪ್ರೈವೇಟ್ ಏಜೆನ್ಸಿಯವರಿಗೆ ಕೊಡುತ್ತಿದ್ದಾರೆ ಆ ರೀತಿ ಕೆ.ಎಂ.ಸಿ. ಮತ್ತು ಬಳ್ಳಾರಿಯಲ್ಲಿ ಕೊಡಬೇಕೆಂದು ಆಸ್ಪತ್ರೆಯನ್ನು ಸ್ವಚ್ಛವಾಗಿಡುವ ಉದ್ದೇಶದಿಂದ ಈಗಾಗಲೇ ನಾವು ಕೇಳಿದ್ದೇವೆ. ಅದು ಇಲಾಖೆ ಮುಂದಿದೆ. ಕೆಎಂಸಿಯಲ್ಲಿರುವ ಹೆಚ್ಚಿನ ಎಲ್ಲಾ ಡಾಕ್ಟರ್‌ಗಳು ಅಲ್ಲಿ ಇರಲಿಕ್ಕೆ ತಯಾರಿಲ್ಲ. ಆ ದೃಷ್ಟಿಯಿಂದ ಖಾಲಿ ಇರುವ ಹುದ್ದೆಗಳನ್ನು ನಾವು ತೀವ್ರಗತಿಯಲ್ಲಿ ನೇಮಕ ಮಾಡಿಕೊಳ್ಳುತ್ತೇವೆ. ಇನ್ನು ಹಾವು ಮತ್ತು ನಾಯಿ ಕಚ್ಚಿದಾಗ ಕೊಡುವ ಔಷಧಿಗಳನ್ನು ನಾವು ಸಪ್ಲೈ ಮಾಡಿದ್ದೇವೆ, ಒಟ್ಟಿನಲ್ಲಿ ಕೆಎಂಸಿ ಮತ್ತು ಬಳ್ಳಾರಿ ಅಟಾನಮಸ್ ಬಾಡಿ ಆಗುವುದರಿಂದ ಅದಕ್ಕೆ ಅದಕ್ಕೆ ತಮ್ಮೆಲ್ಲರ ಸಹಕಾರವನ್ನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಹೆಚ್. ಹೊಸಹಳ್ಳಿ

97 - ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕು ಹೆಚ್. ಹೊಸಹಳ್ಳಿ ಸೇತುವೆ ನಿರ್ಮಾಣಕ್ಕಾಗಿ ಅಂದಾಜು ಪಟ್ಟಿ ಕಳುಹಿಸಿಕೊಟ್ಟಿದ್ದು, ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ ವಿಳಂಬವಾಗಿರಲು ಕಾರಣವೇನು?

ಆ) ಈ ವರ್ಷ ಕಾರ್ಯಕೈಗೆತ್ತಿಕೊಳ್ಳಲು ಕ್ರಮಕೈಗೊಳ್ಳಲಾಗುವುದೇ

ಶ್ರೀ ಹೆಚ್. ಕೆ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಅ) ಆಡಳಿತಾತ್ಮಕ ಮಂಜೂರಾತಿಯನ್ನು ಮಂಡಳಿಯು 6.6.95ರಲ್ಲಿ ನೀಡಿದೆ.

ಆ) ಹೌದು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಅಧ್ಯಕ್ಷರೇ, ಈ ಕೆಲಸಕ್ಕೆ 6.6.95ರಲ್ಲಿ ಆಡಳಿತಾತ್ಮಕ ಮಂಜೂರಾತಿ ಸಿಕ್ಕಿದೆ ಎಂದು ಹೇಳಿದ್ದಾರೆ. ಮೂರು ವರ್ಷಗಳಿಂದಲೂ ಇದಕ್ಕೆ ಮಂಜೂರಾತಿ ಕೊಡಬೇಕೆಂದು ಒತ್ತಾಯಿಸಿ ಕೇಳುತ್ತಿದ್ದೆವು. ನಾನು ಕೇಳಿರುವ ಪ್ರಶ್ನೆ ಈ ಕೆಲಸಕ್ಕೆ ಮಂಜೂರಾತಿ ಸಿಗಲು ಏಕೆ ವಿಳಂಬವಾಯಿತು ಎಂದು ಬಹುಶಃ ತಮಗೆ ಮಲೆನಾಡು ಅಭಿವೃದ್ಧಿ ಮಂಡಳಿ ರಚನೆಯಾದ

ಉದ್ದೇಶ ಗೊತ್ತು ಅಲ್ಲಿನ ಕೆಲಸಗಳು ವಿಳಂಬವಾದರೆ ಈ ರೀತಿಯ ಅಭಿವೃದ್ಧಿ ಮಂಡಳಿಗಳ ರಚನೆಯೇ ನಿರರ್ಥಕವಲ್ಲವೇ? ಅಲ್ಲಿ ಎರಡು ಕಿ.ಮೀ. ದೂರದಲ್ಲಿ ಓಡಾಡುವ ಜನರಿಗೆ ಆ ಸೇತುವೆ ಇಲ್ಲದಿರುವುದರಿಂದ 15 ಕಿ.ಮೀ. ಸುತ್ತಿಬಳಸಿ ಬರಬೇಕಾಗಿದೆ. ಇಂಥ ಕೆಲಸಗಳನ್ನು ವಿಳಂಬ ಮಾಡದೆ ಯಾವಾಗ ಕೆಲಸ ಮುಗಿಸಿಕೊಡುತ್ತಾರೆ ಎಂಬುದನ್ನು ಸಚಿವರು ಹೇಳಬೇಕು.

ಶ್ರೀ ಹೆಚ್ ಜಿ. ಗೋವಿಂದೇಗೌಡ : ಅಧ್ಯಕ್ಷರೇ, ಇದು 94-95ನೇ ಇಸವಿ ಬಜೆಟ್‌ನಲ್ಲಿ ಸೇರಿರುವ ಕೆಲಸ. ಆ ವರ್ಷ ಅನುದಾನ 9 ಲಕ್ಷ ರೂ. ಸೇರಿಸಿದ್ದರು ಮತ್ತು ಹಾಸನ ಜಿಲ್ಲಾಪರಿಷತ್ತಿಗೆ ಎಸ್ಟಿಮೇಟಿಗೆ ಕಳುಹಿಸಿದಾಗ 16.75 ಲಕ್ಷ ಅಂದಾಜಾಗಿದೆ. ನಮ್ಮಲ್ಲಿ ಹಣ ಇಲ್ಲವೆಂದು ವಾಪಾಸ್ ಕಳುಹಿಸಿದ್ದರಿಂದ 95-96ಕ್ಕೆ ನಾವು ಹಣ ಒದಗಿಸುತ್ತೇವೆ. ದಯವಿಟ್ಟು ಈ ಕೆಲಸ ಮಾಡಿಸಿ ಎಂದು ಮಂಜೂರು ಮಾಡಿಕೊಡುತ್ತಿದ್ದೇವೆ, 9 ಲಕ್ಷ ಇದ್ದುದು 16.76 ಲಕ್ಷರೂ ಆಗಿದ್ದರಿಂದ 95-96ನೇ ಸಾಲಿಗೆ ಕೆಲಸವನ್ನು ತೆಗೆದುಕೊಳ್ಳುವ ವ್ಯವಸ್ಥೆಯಾಗಿದೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಈ ಕೆಲಸ ಮುಗಿಸಲು ಯಾವ ಕಾಲಮಿತಿ ಹಾಕಿಕೊಳ್ಳುತ್ತಾರೆಂದು ಅವರು ಹೇಳಬೇಕು. ಏಕೆಂದರೆ ಇದು ಬಹಳ ವರ್ಷ ಹಿಡಿಯುವ ಹಾಗೆ ಕಾಣುತ್ತದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಸದಸ್ಯರಿಗೆ ಗೊತ್ತಿದೆ. ನಮ್ಮ ಮಂಡಳಿ ನಲ್ಲಿ ನಾವು ಕೆಲಸ ಮಾಡತಕ್ಕದ್ದಲ್ಲ. ಮಂಜೂರು ಮಾಡುವುದು ನಮಗೆ ಸಂಬಂಧಪಟ್ಟಿದ್ದು ಕೆಲಸದ ಮೇಲ್ವಿಚಾರಣೆ ನೋಡುವುದು ಕೆಲಸ ಮಾಡುವುದು ಜಿಲ್ಲಾ ಪಂಚಾಯ್ತಿಗೆ ಸಂಬಂಧಿಸಿದ್ದು. ಸದರಿ ಜಿಲ್ಲಾಪಂಚಾಯ್ತಿಯಲ್ಲಿ ನಮ್ಮ ಸ್ನೇಹಿತರು ಸದಸ್ಯರೂ ಆಗಿದ್ದಾರೆ. ಅಲ್ಲಿನ ಸಹ ನಿರ್ದೇಶಕರು ಉಪನಿರ್ದೇಶಕರು ಅಥವಾ ಜಿಲ್ಲಾಪಂಚಾಯ್ತಿ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಮೂಲಕ ಜಾಗ್ರತೆ ಕೆಲಸ ಮಾಡಿಸಿಕೊಳ್ಳಲಿ, ಹಣಕ್ಕೆ ನಮಗೆ ತೊಂದರೆ ಇಲ್ಲ, ಕೂಡಲೇ ನಾವು ಕೊಡುತ್ತೇವೆ.

ಉಪಸಭಾಧ್ಯಕ್ಷರು : ವೈ. ರಾಮಕೃಷ್ಣ ಅವರೇ, ನಿಮ್ಮ ಪ್ರಶ್ನೆಗೆ ಸರ್ಕಾರ ಸ್ವಲ್ಪ ಸಮಯ ಕೇಳಿದೆ.

ಶ್ರೀ ವೈ. ರಾಮಕೃಷ್ಣ : ಉತ್ತರ ಕೊಡಲೂ ಆಗುವುದಿಲ್ಲ ಎಂದರೆ ಹೇಗೆ ಸ್ವಾಮಿ? ನಾನು ಕೇಳಿರುವ ಪ್ರಶ್ನೆ ಬಹಳ ಸುಲಭವಾಗಿದೆ. ತಾವು ಗ್ರಾಂಟ್ ಕೊಡುತ್ತಿದ್ದೀರಿ, ಗ್ರಾಂಟ್ ಎಲ್ಲಿ ಕೊಡುತ್ತಾರೋ ಅವರಿಗೆ ಪ್ರಾತಿನಿಧ್ಯ ಕೊಡಿ ಅಂದರೆ ಇದಕ್ಕೆ ಟೈಂ ಬೇಕು ಅಂದರೆ ಏಕೆ ಬೇಕು ಟೈಂ?

ಶ್ರೀ ಡಿ. ಮಂಜುನಾಥ : ಒಂದು ವಾರ ಟೈಂ ಕೊಡಿ, ನಾನು ಉತ್ತರ ಕೊಡಿಸುತ್ತೇನೆ.

ಶ್ರೀ ವೈ ರಾಮಕೃಷ್ಣ : ಈಗ ಅಡ್ಮಿಷನ್ ಟೈಂ. ಅಡ್ಮಿಷನ್ ಆದಮೇಲೆ ನೀವು ಕೊಟ್ಟರೆಷ್ಟು? ಕೊಡದಿದ್ದರೆಷ್ಟು? ಒಂದು ವಾರ ಕಳೆದ ಮೇಲೆ ಅವರಿಗೆ ಅಡ್ಮಿಷನ್ ಸಿಕ್ಕುವುದಿಲ್ಲ. What is the purpose of putting the question?

ಈ ಪ್ರಶ್ನೆಯ ಸಿಗ್ನಿಫಿಕೇಶನ್ಸ್ ತಿಳಿದುಕೊಳ್ಳಿ.

ಶ್ರೀ ಡಿ. ಮಂಜುನಾಥ : ಒಂದು ವಾರ ಟೈಂ ಕೊಡಿ.

ಶ್ರೀ ವೈ. ರಾಮಕೃಷ್ಣ : ವಾರದ ಪ್ರಶ್ನೆಯಲ್ಲಿ ಸ್ವಾಮಿ, ಅಡ್ಮಿಷನ್ಸ್ ಅಪಾಯಿಂಟ್‌ಮೆಂಟ್ಸ್ ಟೈಂ ಇದು.

ಒಂದು ವಾರ ಬಿಟ್ಟು ಈ ಪ್ರಶ್ನೆ ಉತ್ತರ ಕೊಟ್ಟರೆ its importance will go.

ಶ್ರೀ ಡಿ. ಮಂಜುನಾಥ : ಅಡ್ಮಿಷನ್‌ಗೆ ಏನೂ ತೊಂದರೆ ಇಲ್ಲ, ನೀವು ಕೇಳಿರುವುದು ಅಪಾಯಿಂಟ್‌ಮೆಂಟ್ಸ್-ಅದಕ್ಕೋಸ್ಕರ ಎಲ್ಲಾ ಕಡೆಯಿಂದ ಮಾಹಿತಿ ತರಿಸಿಕೊಳ್ಳುತ್ತಿದ್ದೇನೆ. ಇನ್ನೊಂದು ವಾರದಲ್ಲಿ ಈ ಸದನದಲ್ಲಿ ಉತ್ತರ ಕೊಡುತ್ತೇನೆ.

ಬೀದರ್‌ನಲ್ಲಿ ಪಿ.ಜಿ. ಕೋರ್ಸ್‌ನ ಪ್ರಾರಂಭ

99 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ (ಬಸವ ಕಲ್ಯಾಣ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರಿನಲ್ಲಿ ಪಿ.ಜಿ. ಕೋರ್ಸ್‌ನ್ನು ಪ್ರಾರಂಭಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ವಿಷಯವು ಯಾವ ಹಂತದಲ್ಲಿದೆ?

ಇ) ಹಾಗಿದ್ದಲ್ಲಿ ಪಿ.ಎಚ್. ಕೋರ್ಸ್‌ನ್ನು ಪ್ರಾರಂಭಿಸಲು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಸವರಾಜ್ ಪಾಟೀಲ ಅಟ್ಟೂರ : ಅಧ್ಯಕ್ಷರೇ, ನಾನೊಂದು ಸಣ್ಣ ಪ್ರಶ್ನೆ ಕೇಳಿದೆ ಮಂತ್ರಿಯವರಿಗೆ, ಬೀದರ್ ಜಿಲ್ಲೆ ಗಡಿಪ್ರದೇಶದ ಜಿಲ್ಲೆಯಾಗಿದ್ದು, ರಾಜಧಾನಿಗೆ ತುಂಬ ದೂರದ ಜಿಲ್ಲೆಯಾಗಿದ್ದು, ಅಲ್ಲೊಂದು ಪಿಜಿ ಕೋರ್ಸ್ ಪ್ರಾರಂಭಮಾಡುವ ಸಲುವಾಗಿ ಸಚಿವರಿಗೆ ಕೇಳಿದ್ದೆ. ಅದಕ್ಕೆ ಅವರು ಸರಿಯಾದ ರೀತಿಯಲ್ಲಿ ಉತ್ತರ ಕೊಟ್ಟಿಲ್ಲ. ನಾನು ಕೇಳುವುದಿಷ್ಟೆ. ಗಡಿಭಾಗವಾದ ಜಿಲ್ಲೆಯಲ್ಲಿ ಬಹಳ ದಿವಸದಿಂದಲೂ ಪಿಜಿ ಕೋರ್ಸ ಪ್ರಾರಂಭ ಮಾಡುವ ಸಲುವಾಗಿ ನಮ್ಮ ವಿದ್ಯಾರ್ಥಿಗಳದ್ದು ಬೇಡಿಕೆ ಇದೆ. ಆ ಪ್ರಕಾರ ಮಾಡಲು ತಮಗೆ ಏಕೆ ಆಗುತ್ತಿಲ್ಲ ಎಂದು ಸಚಿವರು ಹೇಳಬೇಕಾಗುತ್ತದೆ.

ಶ್ರೀ ಡಿ. ಮಂಜುನಾಥ : ಈಗಾಗಲೇ ಕರ್ನಾಟಕ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ 3 ಪಿ.ಜಿ. ಸೆಂಟರ್ಸ್‌ಗಳು ಇವೆ. ಸಂಡೂರು, ಬಳ್ಳಾರಿ, ಇನ್ನೊಂದು ರಾಯಚೂರು. ಮಾನ್ಯ ಸದಸ್ಯರು ಈಗ ಬೀದರ್‌ನಲ್ಲಿರಬೇಕು ಎಂದು ಕೇಳುತ್ತಿದ್ದಾರೆ. ಈಗಾಗಲೇ ಅಲ್ಲಿ ಷುಗರ್ ಟೆಕ್ನಾಲಜಿ ಸಂಸ್ಥೆಯನ್ನು